'ಮಳಿ ಹೊಂಡ್ತು.... ಮಳಿ ಹೊಂಟೈತಿ ಬರ್ರಿ ಎಲ್ಲಾರೂ'

'ಏ ಮಳಿ ಹೊಂಟೈತಿ ಎಲ್ಲಾರೂ ಬರ್ರಿ ಗಡಾನ... ಇಲ್ಲಂದರs ತೋಸಿಕೋತಿರಿ ಎಲ್ಲಾರೂ' ಅಂತ ಕರಿಲಿಕತ್ತಿದ್ರಂದ್ರs ನೀವು ಗ್ಯಾರಂಟಿ ಸುರಪುರ–ಗುಲಬರ್ಗ– ಬೀದರ ಕಡಿಗಿ ಹೊಂಟಿರಂತsನ ಅರ್ಥ!

ಹೌದು. ಬೆಂಗಳೂರು ಕಡೆ, 'ಮಳೆ ಬರ್ತಾ ಇದೆ ಬೇಗ ಬೇಗ ಬನ್ನಿ. ಇಲ್ಲವಾದರೇ ತಲೆಯೆಲ್ಲ ತೋಯ್ದು ಶೀತವಾಗುತ್ತೆ' ಅಂತ ಅಂತಾರ.

ಅದೇ ಬಿಜಾಪುರ ಕಡೆಗೆ, 'ಏ ಬರ್ರೆಲೇ ಜಲ್ದಿ ಜಲ್ದಿ, ಇಲ್ಲಾಂದ್ರ ತೋಸಗೊಂಡು ಸಾಯ್ತಿರಲೇ' ಅಂತ ಕರಿತಾರ.

'ಏ ಹುಚ್ಚ ಸೂಳೆಮಗನ ಜಲ್ದಿ ಬಾರಲೇ, ಏನು ಮಳ್ಯಾಗ ಸರಗ್ಯಾಡಬೇಕಂತ ಮಾಡಿ ಏನು?' ಅಂತನೂ ಇಲ್ಲಿ ಭಾಳ ಪ್ರೀತಿಲೇ ಕರಿತಾರ.

'ಎಂಥದು ಮಾರಾಯ್ರೆ, ಈ ಮಳೆ ಎಷ್ಟು ಸುರಿತಾ ಇದೆ. ಇದು ನಿಲ್ಲುವ ಲಕ್ಷಣಗಳು ಉಂಟೆ? ಧೋ ಧೋ ಅಂತ ಸುರೀತಾ ಇದೆ' ಇದು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಕಡೆಗಿನ ಭಾಷೆ. ಇನ್ನೂ ಕುಂದಾಪುರದ ಕುಂದಗನ್ನಡ, ಬ್ಯಾಡಗಿಯ ಮೆಣಸಿನಕಾಯಿ ಕನ್ನಡ, ಅಮೀನಗಡದ ಕರದಂಟಿನ ಕನ್ನಡ, ಬೆಳಗಾವಿಯ ಮರಾಠಿ ಮಿಶ್ರಿತ ಕುಂದಾ ಕನ್ನಡ, ಮೈಸೂರು ಮಲ್ಲಿಗೆಯ ಘಮ ಘಮ ಕನ್ನಡ, ಕೋಲಾರದ ತೆಲುಗನ್ನಡ, ಆನೇಕಲ್ಲಿನ ತಮಿಳುಕನ್ನಡ, ಕಾಸರಗೋಡು ಸರಹದ್ದಿನ ಮಲೆಯಾಳಕನ್ನಡ, ಗದಗಿನ ಪ್ರಿಂಟಿಂಗ್ ಪ್ರೆಸ್ಸಿನ ಕನ್ನಡ, ಬಾಗಲಕೋಟೆಯ ಗಂಡು ಕನ್ನಡ, ಹಾವೇರಿಯ ಯಾಲಕ್ಕಿ ಕನ್ನಡ, ಇಳಕಲ್ಲಿನದು ಸೀರೆಯಂತಹ ನವಿರುಗನ್ನಡ, ಗುಳೇದಗುಡ್ಡ ಖಣದ ಕನ್ನಡ, ಚಿಕ್ಕಮಗಳೂರಿನ ಕಾಫಿ ಕನ್ನಡ, ಮಡಿಕೇರಿಯ ವೀರಸೇನಾ ಕನ್ನಡ, ನಮ್ಮ ರಾಜಧಾನಿ ಬೆಂಗಳೂರಿನದ್ದು 'ಮಿಸ್ಸಳ ಭಾಜಿ' ಕನ್ನಡ .... (ಯಾಕೆಂದರೆ ಇಲ್ಲಿ ತೆಲುಗು, ತಮಿಳು, ಮಲಯಾಳಂ, ರಾಜಸ್ಥಾನಿ, ಬಂಗಾಲಿ, ಗುಜರಾತಿ ಉರ್ದು –ಹೀಗೆ ಎಲ್ಲಾ ಸೇರಿ ಅಲ್ಲಲ್ಲಿ ಕೊಂಚ ಕೊಂಚ ಕನ್ನಡ ಕೇಳಿಸುತ್ತದೆ. ಜೈ ಕನ್ನಡಾಂಬೆಯ ಮಕ್ಕಳು ಇಲ್ಲಿ ನವೆಂಬರ್ ಕನ್ನಡಿಗರಾಗಿರುತ್ತಾರೆ.)

ಹಿಂಗ ಏನಪಾಂತಂದ್ರs... 'ಉದಯವಾಯಿತು ನಮ್ಮ ಚೆಲುವ ಕನ್ನಡ ನಾಡು'

ಮೊದಲು ಹರಿದು ಹಂಚಿಹೋಗಿದ್ದ ಮೈಸೂರು ರಾಜ್ಯ ಅಂದರೆ, ಅದು ಹಳೇ ಮೈಸೂರು, ಕರಾವಳಿ ಕನ್ನಡ, ಹೈದರಾಬಾದ ಕರ್ನಾಟಕ, ಮುಂಬೈ ಕರ್ನಾಟಕಗಳನ್ನೆಲ್ಲಾ ಒಂದುಗೂಡಿಸಿ ಮೈಸೂರು ರಾಜ್ಯ ಆಯಿತು. ಇದಕ್ಕಾಗಿ ಏಕೀಕರಣ ಚಳವಳಿ ನಡೆಯಿತು. ಆಲೂರು ವೆಂಕಟರಾಯರು ಇದಕ್ಕಾಗಿ ಶ್ರಮಿಸಿದರು. ವಿವಿಧತೆಯಲ್ಲಿ ಏಕತೆ ಇರುವ ಪ್ರದೇಶಗಳೆಲ್ಲಾ ಒಂದಾದವು. ರಾಜಸತ್ತೆ ಹೋಗಿ ಪ್ರಜಾಸತ್ತೆ ಬಂತು. ಮೈಸೂರು ರಾಜ್ಯ ಆಯಿತು. ನಂತರ ಇದಕ್ಕೆ 1973ರಲ್ಲಿ ದೇವರಾಜ ಅರಸರ ನೇತೃತ್ವದಲ್ಲಿ 'ಕರ್ನಾಟಕ' ಅಂತ ಹೆಸರಾಯ್ತು. 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಅಂತ ಕವಿಗಳು ಹಾಡಿದರು. 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು...' ಅಂತನೂ ಹಾಡಿದ್ದರು.

ಅಂತೂ ಉದಯವಾಯಿತು. ಆದರೆ, ನಮ್ಮ ಹಿರಿಯರ ಕನಸಿನಂತೆ ಅಲ್ಲ. ಅದು ಬೇರೆನೇ ಆಕಾರ ಪಡೀತು. ರಾಜಧಾನಿ ಬೆಂಗಳೂರನ್ನು ತಮಿಳು–ತೆಲುಗು ಮಾಫಿಯಾಗಳು ಆವರಿಸಿಕೊಂಡವು. ನಮ್ಮ ರಾಜಕಾರಣಿಗಳೇ ಇದಕ್ಕೆ ನೇರ ಹೊಣೆ ಎನ್ನೋಣವೇ. 'ಹುಸಿ ಹೋಗದ ಹಸಿ ಗೋಡೆಯ ಹರಳಿನಂತೆ' ಕನ್ನಡ ಅಲ್ಲಿ ಗಟ್ಟಿಯಾಗಿ ಕೂಡಲೇ ಇಲ್ಲ.

ನಮ್ಮ ನಾಡಿನಲ್ಲಿ ವೈವಿಧ್ಯತೆಯಲ್ಲಿ ಏಕತೆ ಇದೆ ಅಂತಾರೆ. ಇರಬಹುದು. ಆದರೆ ಅದು ಎಲ್ಲರಿಗೂ ಅನ್ವಯವಾಗಬೇಕಲ್ಲವೆ? ಅದು ತೆಲುಗರಿಗೆ, ತಮಿಳರಿಗೆ, ಮಲೆಯಾಳಿಗಳಿಗೆ, ಮಹಾರಾಷ್ಟ್ರಿಗರಿಗೆ ಇರಲಾರದ್ದು ಕರ್ನಾಟಕಕ್ಕೇ ಏಕೆ ಎಂಬುದು ಪ್ರಸ್ತುತ ನಿಜವಾದ ಕನ್ನಡಿಗನ ಪ್ರಶ್ನೆ.

ಏನು ಬೆಂಗಳೂರು ಕೇಂದ್ರಾಡಳಿತ ಪ್ರದೇಶವೇ ಎಂಬ ಪ್ರಶ್ನೆ ಕೇಳಿಕೊಳ್ಳೋಣ. ನಾವು ರಾಜಧಾನಿಯಲ್ಲಿ ನೋಡಿದರೆ ಹಂಗೇ ಭಾಸವಾಗುತ್ತದೆ. ಇಂಗ್ಲಿಷ್ ಮೀಡಿಯಂ ಶಾಲೆಗಳ ದರ್ಬಾರು, ಕನ್ನಡಕ್ಕೆ ಕೊನೆಯ ಸ್ಥಾನ. ಬಾಯಲ್ಲಿ ಮಾತ್ರ ಕನ್ನಡ ಎಂದರೂ, ಉಳಿದಂತೆ ಕಿವಿಗೆ ಬೀಳೋದು 'ಎನ್ನಡಾ ಎನ್ನಡಾ'. ಇದು ನಮ್ಮ ಇಂದಿನ ಅಸಲಿಯತ್ತು. ಇದಕ್ಕಾಗಿ ಮರುಗುವುದೋ ಅಥವಾ ಉದಾರತೆಯೆಂದು ಸಂತೋಷ ಪಡುವುದೋ ಎಂದು ಗೊತ್ತಾಗದಂತಹ ವಿಚಿತ್ರ ಸ್ಥಿತಿ ನಿರ್ಮಾಣವಾಗಿದೆ.

ಇಂತಹ ಭಾಷಾ ವೈವಿಧ್ಯ, ನಿಸರ್ಗ ಸಂಪತ್ತಿನ ಪ್ರದೇಶ